ಇನ್ನೇನು ಕೆಲವೇ ನಿಮಿಷಗಳಲ್ಲಿ ತೆಂಕಣ ದೇಶದ ಜನರೆಲ್ಲ ಒಟ್ಟಾಗಿ ಒಂದೇ ಸಮಯಕ್ಕೆ ಶುಶ್ರೂಷಕ ಸಮೂಹಕ್ಕೆ ಸಲಾಮು ಕೊಡಲಿದ್ದಾರೆಂದೂ ಹೇಳುತ್ತಿದ್ದಳು. ಮಾತಾಡುವ ಪೆಟ್ಟಿಗೆಯ ವತಿಯಿಂದ ಬೀದಿಗಿಳಿದಿದ್ದ ಕ್ಯಾಮೆರಾಗಳು ಖಾಲಿ ಬೀದಿಗಳನ್ನು ತೋರಿಸುತ್ತ ದೊರೆಯ ಕರೆಗೆ ದೊರೆತ ಬೆಂಬಲದ ಬಗ್ಗೆಯೂ ಪ್ರಶಂಸೆ ಮಾಡುತ್ತಿದ್ದವು. ಜೊತೆಗೆ ಈಗಾಗಲೇ ಅದೃಶ್ಯ ಜೀವಿಯ ದಾಳಿಗೊಳಗಾದ ದೇಶಗಳ ರಾಜರುಗಳು ಬೀದಿಯಲ್ಲಿ ಬಲೆ ಬೀಸುವ ಅನ್ಯಗ್ರಹ ಜೀವಿಯನ್ನು ನಿಗ್ರಹಿಸಲು ಹೀಗೆ ಮನೆ ಬಾಗಿಲು ಮುಚ್ಚಿಕೊಳ್ಳುವ ಆಜ್ಞೆ ಹೊರಡಿಸಿರುವ ಬಗ್ಗೆ ಹಾಗೂ ಸಂಜೆ ಕಿವಿ ತಮಟೆ ತೂತಾಗುವಂತೆ ಸದ್ದು ಮಾಡಿ, ಆಕಾಶಕ್ಕೆ ಬೆಳಕು ತೋರಿಸಿ ಸೂಕ್ಷ್ಮಾಣುಗಳನ್ನು ಅಣುರೇಣುತೃಣಕಾಷ್ಟ ನಾಶ ಮಾಡಲು ಪರಿಹಾರ ಕಂಡುಕೊಳ್ಳುತ್ತಿರುವ ಬಗ್ಗೆ ಸುದ್ದಿ ಬಿತ್ತರಿಸುತ್ತಿದ್ದವು. ದೊರೆ ಹಾಗೂ ಅವನ ಬಳಗದ ತಲೆ ಈಗ ಹೇಗೆ ಕೆಲಸ ಮಾಡುವುದೆಂದು ಊಹಿಸಬಲ್ಲ ರಾಜಗುರುವಿಗೆ ದೊರೆಯ ಇಂದಿನ ನಡೆಯ ಹಿಂದಿನ ಉದ್ದೇಶ ಏನೆಂಬುದು ಅರ್ಥವಾಗಿ ಅವನ ಮುಂದಿನ ನಡೆ ಹೊಳೆದು ಹೋಯಿತು. ಈ ದೇಶದ ದೊರೆಯೂ ಊರಿಗೆ ಬಂದ ಮಾರಿ ಓಡಿಸುವವರೆಗೆ ಎಲ್ಲರೂ ಗೆಯ್ಮೆ ನಿಲ್ಲಿಸಿ ಮನೆಯೊಳಗಿರಿ ಅಂತ ಆಜ್ಞೆ ಹೊರಡಿಸಿಬಿಟ್ಟಾನು. ಅಯ್ಯೋ... ಬಸವಾ... ಹಾಗೇನಾದರೂ ಮಾಡಿದರೆ ಉಳ್ಳವರು ಜಳ್ಳೆಂದು ಬಿಟ್ಟ ತೆನೆಯಿಂದ ಕಾಳು ಆರಿಸಿ ಅದನ್ನು ಸುಲಿದು ಉಣ್ಣುವ ಈ ಪಾಪದ ದೇಶದ ಪಾಪದ ಮಂದಿಯ ಗತಿ ಏನಾದೀತು... ದುಡುಕಿ ಇವನು ಅಂತಹ ಎಡವಟ್ಟು ಮಾಡುವ ಮುಂಚೆ ದೊರೆಯನ್ನು ಭೇಟಿಯಾಗಲೇಬೇಕು. ಈಗಾಗಲೆ ಜನ ದಿಕ್ಕೆಟ್ಟಿದ್ದಾರೆ. ಅಂತಾದ್ದರಲ್ಲಿ ಗಾಯದ ಮೇಲೆ ಬರೆ ಹಾಕಿದಂತೆ ದುಡಿಮೆಗೇ ಬೀಗ ಜಡಿದರೆ... ಮುಂದೆರಗುವ ಆಪತ್ತು ಕಣ್ಣು ಕುಕ್ಕಿತು. ಈಗಿಂದೀಗ ಈ ದೊರೆಯನ್ನು ತಡೆಯಬೇಕು. ಇಲ್ಲಾ ಅಂದ್ರೆ ಕೋಟೆ ಸೂರೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದಂಗಾದೀತು. ರಾಜಗುರುವನ್ನು ಅಲ್ಲಾಡಿಸುವಂತೆ ಮಾತಿನ ಪೆಟ್ಟಿಗೆಯೊಳಗೆ ನಿರೂಪಕಿಯ ಉದ್ವೇಗ ಭರಿತ ಧ್ವನಿಯನ್ನೂ ಮೀರಿಸಿ ಕಿವಿ ತಮಟೆ ಒಡೆಯುವಂತೆ ಯುದ್ಧ ಗೆದ್ದು ಬಂದೆವೆಂಬಂತೆ ಶಂಖ, ಜಾಗಟೆಗಳ ಸದ್ದು. ಅದಿಲ್ಲದವರು ತಾಟು ಸಟ್ಟುಗದಲ್ಲೇ ಡಣ್ ಡಣಾರ್ ಎಂದು ಬಡಿಯುತ್ತಿದ್ದಾರೆ. ಮೆರವಣಿಗೆ ಬೇರೆ ಹೊರಟಿದ್ದಾರೆ. ಅರೆ! ದೊರೆ ಹೇಳಿದ್ದು ಸಲಾಮು ಹೊಡೆಯಲು. ಈ ಜನ ನೋಡಿದರೆ ಮತ್ತೂ ಒಂದು ಹೆಜ್ಜೆ ಜಾಸ್ತಿ ಭಕ್ತಿ ತೋರಿಸಿದ್ದಾರೆ. ರಾಜಗುರುವಿಗೆ ಏನೋ ಹೊಳೆಯಿತು. ಹೌದಲ್ಲ.. ದೊರೆ ತನ್ನ ಪ್ರಜೆಗಳಿಗೆ ಮೋಡಿ ಮಾಡಿಟ್ಟುಕೊಂಡಿದ್ದಾನೆ. ಈ ದೊರೆಯ ಬಾಯಿಂದ ಏನು ಬಿದ್ದರೂ ಜನ ನಂಬುತ್ತಾರೆ. ಇದು ಸರಿಯಾದ ಸಮಯ.. ಹೇಳಬೇಕು ದೊರೆಗೆ ಈಗ ತೆಂಕಣ ದೇಶಕ್ಕೆ ಆಪತ್ಕಾಲ ಬಂದಿದೆ.

ದೇವಧನವಿರುವುದು ದೇಶದ ಆಪತ್ಕಾಲಕ್ಕಾಗಿ. ಎಲ್ಲಾ ಮಂದಿರ ಮಸೀದಿ ಇಗರ್ಜಿಗಳಲ್ಲಿರುವ ದೇವಧನವನ್ನು ಆಡಳಿತ ಯಂತ್ರ ಕೂಡಲೆ ಕೈ ವಶ ಮಾಡಿಕೊಂಡರೆ ಇಡೀ ಸೀಮೆಯ ಮನುಷ್ಯರಿಗೆ ಹೊಟ್ಟೆಗೆ ಬಟ್ಟೆಗೆ ಆರೋಗ್ಯಕ್ಕೆ ಬೇಕಾದ ವ್ಯವಸ್ಥೆ ಒದಗಿಸಬಹುದು. ಆಗ ಬೇಕಾದರೆ ನಾಡಿಗೇ ಬೀಗ ಜಡಿದು ಅದೃಶ್ಯ ವೈರಿಯ ವಿರುದ್ಧ ಸಮರ ಹೂಡಲಿ. ದೇವರೇ ತನಗೆ ಹೀಗೆ ನಿರ್ದೇಶನ ಕೊಟ್ಟನೆಂದು ರಂಗು ರಂಗಾಗಿ ಹೇಳಿದರೆ ಮಹಾನ್ ದೇವಭಕ್ತ ದೊರೆಯ ಮಾತಿಗೆ ಜನ ಉಘೇ ಉಘೇ ಅನ್ನುತ್ತಾರೆ ಖಂಡಿತ. ಆದರೆ, ಈ ದೊರೆಯ ಸುತ್ತ ಇರುವ ರಾಜಕಾರಣದ ಮಂತ್ರಾಲಯ ಇದಕ್ಕೆಲ್ಲ ಬಿಡಲಾರದು. ಏನೇ ಆಗಲಿ. ತಾನಂತು ದೊರೆಗೊಂದು ಮಾತು ಹೇಳಲೇಬೇಕು. ಹೇಳಬೇಕೆಂದರೆ ದೊರೆ ತನ್ನ ಭೇಟಿಗೆ ಬರಬೇಕು. ಅವನೊಮ್ಮೆ ಈ ಮನೆಗೆ ಕಾಲಿಡುವಂತೆ ಮಾಡೊ ಶಿವಾ ಎಂದು ಪರಿಪರಿಯಾಗಿ ತನ್ನೊಳಗೇ ಅಲವತ್ತುಕೊಳ್ಳತೊಡಗಿದ ರಾಜಗುರು. ಆಗಲೆ ಆಳುಗಳು ಮತ್ತಷ್ಟು ಉಸಿರುಗಟ್ಟುವಂತೆ ಅವನ ಅವಕುಂಠನ ಎಳೆದು ಸರಿ ಪಡಿಸಿ, ಮಾತಾಡುವ ಪೆಟ್ಟಿಗೆಯ ಬಾಯಿ ಜಡಿದು ಹೊರಟಿದ್ದರಿಂದ ಎಲ್ಲ ಸದ್ದುಗಳೂ ನಿಂತಿತು. ರಾಜಗುರುವಿನ ಚಡಪಡಿಕೆ ಮಾತ್ರ ಮತ್ತಷ್ಟು ಹೆಚ್ಚಿತು. ಯಾರಾದರೂ ವಿದೇಶಿ ನೆಂಟರು ಬಂದು ಬಿಡಲಿ. ಆ ನೆಂಟರನ್ನು ಕರೆದುಕೊಂಡು ದೊರೆ ಇಲ್ಲಿಗೆ ಬರದಿರುವುದಿಲ್ಲ. ಆಗ... ಆಗಲೇ ಅವನನ್ನು ಹಿಡಿದುಬಿಡುತ್ತೇನೆ ಎಂದು